

ಹಿಂದಿನ ದಿನ...

ತೋಟದಲ್ಲಿ ನೆರಳು ಕಡಿಯುವ ವೇಳೆ, ದುಮ್ಮನಿಗೆ ಒಂದು ಹಲಸಿನ ಹಣ್ಣು ಸಿಕ್ಕಿತ್ತು. ಹಾನು ತುಂಬಿದ ಕೆಂಪು ತೊಳೆಯ ಆ ಬಿಳುವನ ಹಲಸಿನ ಹಣ್ಣಿನ ಗಮಲಿಗೇ ಅವನ ಬಾಯಲ್ಲಿ ನೀರೂರಿಬಿಟ್ಟಿತ್ತು. ಅಲ್ಲಿಯೇ ಅದನ್ನು ಹಿಸಿದು ಬಿಡಿಸಿಕೊಂಡು ಮುಂದಿಟ್ಟುಕೊಂಡಿದ್ದ. ದಪ್ಪ ದಪ್ಪ ಚಂದ್ರಹಲಸಿನ ತೊಳೆಗಳನ್ನು ಬಾಯಿಗೆ ಇಟ್ಟೊಡನೆಯೇ ಅದರ ಹಾನು ನಾಲಿಗೆಗಿಳಿದು ಇಡೀ ತೊಳೆಯೇ ಕರಗತೊಡಗಿತು. ಹಾಗೆಯೇ ಆ ರುಚಿಕಟ್ಟಾದ ತೊಳೆಗಳನ್ನು ಗುಳುಮ್ಮನೆ ನುಂಗುತ್ತಾ, ಬೀಜಗಳನ್ನು ಹೊರಕ್ಕೆ ಪಿಚಕ್ಕನೆ ಉಗಿಯುತ್ತಾ ಹೋದವನಿಗೆ ಇಡೀ ಹಣ್ಣು ಖಾಲಿಯಾದದ್ದೇ ತಿಳಿದಿರಲಿಲ್ಲ.

ಅಲ್ಲಿಂದ ಹೊರಟು ಸಂಜೆಯ ಬೈನೆ ಸೇಂದಿ ಬಸಿದು, ಗೌಡರ ಪಾಲು ಇಟ್ಟು ಉಳಿದದ್ದನ್ನು ಗುಡ್ಲಿಗೆ ತಂದಿದ್ದ. ಬೆಳಗ್ಗೆ ಮಾಡಿಟ್ಟು ಹೋಗಿದ್ದ ಕುಸಲಕ್ಕಿ ಗಂಜಿ ಹಾಗೂ ಕಲ್ಲೇಡಿಯ ಚಟ್ನೆ ಸಣ್ಣ ಸಣ್ಣ ಕುಡಿಕೆಗಳಲ್ಲಿ ಹಾಗೆಯೇ ಉಳಿದಿದ್ದವು.

ಹಣ್ಣೇ ಹೊಟ್ಟೆ ತುಂಬಿಕೊಂಡದ್ದರಿಂದ ಆ ಕೂಡಲೇ ಸೇಂದಿ ಕುಡಿಯಲಾಗಲೀ ಗಂಜಿ ಉಣ್ಣಲಾಗಲೀ ಮನಸ್ಸಾಗಿರಲಿಲ್ಲ. ಒಂದೆರಡು ಗಂಟೆ ಚಾಪೆಯ ಮೇಲೆ ಹೊರಳಾಡಿ, ಒಂದೆರಡು ಬೀಡಿ ಎಳೆದು ನಂತರ ಸೇಂದಿ ಕುಡಿದು, ಏಡಿ ಚಟ್ನೆ ನಂಚಿಕೊಂಡು ಸ್ವಲ್ಪ ಗಂಜಿ ಉಂಡು, ಉಳಿದಿದ್ದನ್ನು ಮುಚ್ಚಿಟ್ಟಿದ್ದ. ಇನ್ನೇನು ಮಲಗಿ ನಿದ್ದೆ ಹೋಗಬೇಕು ಎಂಬಷ್ಟರಲ್ಲಿ ಗುಡ್ಲಿನ ಹೊರಗೆ ಗೌಡರ ಧ್ವನಿ ಕೇಳಿತ್ತು.

'ದುಮ್ಮ, ಮಲ್ಗಿದೀಯಾ. ನಾಳೆ ಚೌಡಿ ಹಬ್ಬ ನೆನಪಿದೆಯಲ್ಲಾ. ಬೆಳಗ್ಗೆ ಚೌಡಿ ಬನಕ್ಕೆ ಹೋಗವ್ರಿಗೆ ಯಾರಿಗೂ ನಿನ್ನ ಮುಖ ತೋರಿಸಬೇಡ. ಮುಟ್ಟು ತಟ್ಟು ಆಗುತ್ತೆ... ಬೆಳಕು ಹರಿಯೋವರೆಗೂ ಗುಡ್ಲೊಳಗೇ ಇರು. ಹೊರಗಿಂದ ನರಿಕೆ ಬಾಗ್ಲು ಕಟ್ಟಿರ್ತೀನಿ. ಪೂಜೆ ಮುಗಿದು ಗುಂಡಿನ ಶಬ್ದ ಆದ ಮೇಲೆ ಯಾರಾದ್ರೂ ಬಂದು ಬಿಚ್ತಾರೆ. ಇಲ್ಲ. ನೀನೇ ಕೈ ತೂರಿಸಿ ಕಟ್ಟು ಬಿಚ್ಚಿ ಹೊರಗೆ ಬಾ. ಹಾಂ! ನಾಳೆ ಮನೇಲಿ ಅಪಾರ ನೆಂಟರು ಇರ್ತಾರೆ. ನಾಳೆ ಪರ್ತಿ ಸೇಂದಿ ನನಗೇ ಇಟ್ಟಿರು' ಎಂದು ಹೇಳಿ ಹೋಗಿದ್ದು ನೆನಪಾಯಿತು.

ಅವನ ಗುಡ್ಲಿನ ಮುಂದಿನ ರಸ್ತೆಯಲ್ಲಿ ವಾಹನಗಳ ಮೇಲೆ ಸಾಗಿಸುತ್ತಿದ್ದ ಹಂದಿಗಳ ಕಿರುಚಾಟ, ಕಾಲು ಕಟ್ಟಿ ಬಡಿಗೆ ಸರಿದ ಹಂದಿಗಳನ್ನು ಹೆಗಲ ಮೇಲೆ ಹೊತ್ತು ಸಾಗುತ್ತಿದ್ದುದರ ಜತೆಗೆ ಕಾಲಾಳುಗಳು ಜಾತ್ರೆಯೋಪಾದಿಯಲ್ಲಿ ನಡೆದು ಹೋಗುತ್ತಿದ್ದುದು ಗುಡ್ಲಿನೊಳಗಿದ್ದ ದುಮ್ಮನಿಗೆ ಅನುಭವವೇದ್ಯವಾಗುತ್ತಿತ್ತು.

ಈ ಶೂದ್ರ ಭಕ್ತರೆಲ್ಲಾ ಚೌಡಿ ಬನದೆಡೆಗೆ ಹಂದಿಗಳನ್ನು ಹೊತ್ತು ಸಾಗುತ್ತಿರುವುದನ್ನು ನೋಡಿದರೆ ಪುರೋಹಿತರು ಆಗಲೇ ಊರ ಪ್ರವೇಶದಲ್ಲಿರುವ ಚಾಮುಂಡೇಶ್ವರಿ ಗುಡಿಗೆ ಬಂದು ಹೋಗಿರುವುದು ಅವನಿಗೆ ಖಚಿತವಾಯಿತು. ಬಲಿಯ ಹಂದಿಗಳು ಊರು ದಾಟಿ ಬನದೆಡೆಗೆ ಸಾಗಬೇಕಾದರೆ ಭಕ್ತಾದಿಗಳು ಚೌಡಿಗಿಂತ ಮೊದಲು ಚಾಮುಂಡೇಶ್ವರಿ ಅಮ್ಮನಿಗೆ ಹರಕೆ ಅರ್ಪಿಸಿ ಹೋಗಬೇಕಾದದ್ದು ವಾಡಿಕೆ.

ಈ ಬಾರಿ ಎಷ್ಟು ಹಣ ಹರಕೆಯ ಮುಡುಪಿನ ರೂಪದಲ್ಲಿ ಬಂದಿರಬಹುದು? ಜತೆಗೆ ವಸ್ತು ರೂಪದಲ್ಲಿ ಏನೇನು ಬಂದಿರಬಹುದು. ಅದನ್ನೆಲ್ಲಾ ಪುರೋಹಿತರು ಯಾವ ವಾಹನದಲ್ಲಿ ಸಾಗಿಸಿರಬಹುದು? ಎಂದು ಯೋಚಿಸುತ್ತಲೇ, ಇನ್ನೇನು ಒಂದು ಗಂಟೆಯಲ್ಲಿ ಬೆಳಗಾಗಬಹುದು ಎಂದುಕೊಳ್ಳುತ್ತಾ ಮನಸ್ಸಿಗೆ ಸಮಾಧಾನ ತಂದುಕೊಳ್ಳಲು ಯತ್ನಿಸುತ್ತಿದ್ದಂತೆಯೇ ಮತ್ತೆ ಮೂತ್ರದ ಒತ್ತಡ ಕಾಣಿಸಿಕೊಂಡಿತು.

ಹೇಗಾದರೂ ಮಾಡಿ ಇನ್ನೊಂದು ಗಂಟೆ ಸಹಿಸಿಕೊಳ್ಳಬೇಕೆಂದು ಮನಸ್ಸು ಗಟ್ಟಿ ಮಾಡಿಕೊಳ್ಳುತ್ತಾ ಬೀಡಿಯೊಂದನ್ನು ಹತ್ತಿಸಿ ಗುಡ್ಲಿನ ನರಕೆಗೆ ಒರಗಿ ಕುಳಿತ.

ತಾನು ಹೇಗೆ ಈ ಕಾಡ ನಡುವಿನ ಒಂಟಿ ಗುಡ್ಲಿನಲ್ಲಿ, ಅದು ಹೇಗೆ ಒಂಟಿ ಪಿಶಾಚಿಯಂತೆ ಸಿಕ್ಕಿಹಾಕಿಕೊಂಡೆ ಎಂದು ಯೋಚಿಸತೊಡಗಿದ.

ಮನಸ್ಸು ಗತಕಾಲಕ್ಕೆ ಜಾರತೊಡಗಿತು.

ಅವನು ದೂರದ ಕನ್ನಡ ಜಿಲ್ಲೆಯಲ್ಲಿ ಪಾಲೆಕೇರಿಯಲ್ಲಿ ತನ್ನ ಬಳಗದೊಂದಿಗೆ ನೆಮ್ಮದಿಯಾಗಿಯೇ ಇದ್ದ. ತನ್ನದೇ ಸ್ವಂತ ಗುಡಿಸಲು, ಹೆಂಡತಿ ಅಪ್ಪಿ, ಮೂರು ವರ್ಷದ ಮಗು ಅಕ್ಕಣಿ. ಸಂತೋಷವಾಗಿರಲು ಇನ್ನೇನು ಬೇಕು? ಆದರೆ ಏನು